ಶ್ರೀ ಹೆಚ್. ಸಿ ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದ ಎಲ್ಲಾ ಗ್ರಾಮದಲ್ಲಿ ಸ್ಮಶಾನಕ್ಕಾಗಿ ಜಮೀನನ್ನು ಖರೀದಿಸಲು ಅವಕಾಶ ಕಲ್ಪಿಸಿ ಸರ್ಕಾರಿ ಆದೇಶ ಸಂಖ್ಯೆ : ಕಂಇ 185 ಭೂ ಸ್ವಾಮ್ಯ 92 ದಿನಾಂಕ : 20- 10-95 ಎಲ್ಲಾ ಜಿಲ್ಲಾಧಿಕಾರಿ ಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಆ) 22 ಗ್ರಾಮಗಳು.

ಇ) ಬಂದಿದೆ.

ಈ) ಸ್ಮಶಾನ ಭೂಮಿ ಇಲ್ಲದ ಗ್ರಾಮಗಳಲ್ಲಿ ಸ್ಮಶಾನ ಸೌಲಭ್ಯ ಒದಗಿಸಲು ಸರ್ಕಾರಿ ಭೂಮಿ ಲಭ್ಯ ವಿದ್ದರೆ ಅದನ್ನು ಕಾಯ್ದಿರಿಸಲು ಇಲ್ಲದೇ ಇದ್ದಲ್ಲಿ ಈ ಕಾರ್ಯಕ್ಕಾಗಿ ಖಾಸಗಿ ಜಮೀನನ್ನು ಕ್ರಯಕ್ಕೆ ಪಡೆದು ಅಥವಾ ಸ್ವಾಧೀನಪಡಿಸಿಕೊಳ್ಳಲು ಹಣಕಾಸಿನ ಲಭ್ಯತೆಯ ಆಧಾರದ ಮೇಲೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು.

ಆಶ್ರಯ ಯೋಜನೆಯಲ್ಲಿ ಅವ್ಯವಹಾರ

1189 (1357) ಶ್ರೀ ಸುಬ್ಬಾರೆಡ್ಡಿ ಕೆ.ಎನ್ (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ನಡೆದ ಅವ್ಯವಹಾರಗಳ ಬಗ್ಗೆ ಸಿ.ಓ.ಡಿ. ತನಿಖೆಗೆ ಒಪ್ಪಿಸಲಾಗಿದೆಯೇ:

ಆ) ಒಪ್ಪಿಸಿದ್ದಲ್ಲಿ ಯಾವಾಗ ಒಪ್ಪಿಸಲಾಯಿತು ಹಾಗೂ ತನಿಖಾ ವರದಿಯನ್ನು ಸಿ. ಒ. ಡಿ ಇಲಾಖೆಯವರು ಸರ್ಕಾರಕ್ಕೆ ಒಪ್ಪಿಸಿದ್ದಾರೆಯೇ;

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹಾದು

ಆ) ಸರ್ಕಾರದ ಆದೇಶ ಸಂಖ್ಯೆ. ಹೆಚ್ ಯು. ಡಿ. 352, ಕೆಹೆಚ್‌ಬಿ:92 ದಿನಾಂಕ 12- 1-93ರಲ್ಲಿ ಸಿ.ಓ.ಡಿ. ತನಿಖೆ ನಡೆಸಲು ಒಪ್ಪಿಸಲಾಗಿದ್ದು, ಸಿ. ಓ. ಡಿ ಇಲಾಖೆಯವರು ತನಿಖಾ ವರದಿಯನ್ನು ದಿನಾಂಕ : 2 - 4 - 96ರಂದು ಸರ್ಕಾರಕ್ಕೆ ಒಪ್ಪಿಸಿರುತ್ತಾರೆ.

ಬೀಜ ಮತ್ತು ರಸಗೊಬ್ಬರಗಳ ಮಾರಾಟ ಕೇಂದ್ರಗಳು

1190 (1358) ಶ್ರೀ ಕೆ. ಎನ್. ಸುಬ್ಬಾರೆಡ್ಡಿ (ಶಿವಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ಸರ್ಕಾರವು ಕೃಷಿ ಪರಿಕರಗಳಾದ ಬೀಜ ಮತ್ತು ರಸಗೊಬ್ಬರ ಮಾರಾಟ ಕೇಂದ್ರಗಳ ಮೇಲೆ ದಾಳಿ ನಡೆಸಿದೆಯೇ ?

ಆ) ಹಾಗಿದ್ದಲ್ಲಿ ಎಲ್ಲಿ ಅಂತಹ ದಾಳಿಗಳನ್ನು ನಡೆಸಿದೆ;

ಇ) ಅಂತಹ ದಾಳಿ ನಡೆಸಿದ ಪ್ರಕರಣದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿಸಚಿವರು) :

ಅ) ಹೌದು

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ನಡೆಸಲಾಗಿದೆ.

ಇ) ಕೃಷಿ ಪರಿಕರಗಳಾದ ಜೀಜ ಮತ್ತು ರಸಗೊಬ್ಬರಗಳ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ಮತ್ತು ಬೀಜಗಳ ಕಾಯ್ದೆ 1966 ಬೀಜಗಳ ಆದಿನಿಯಮ 1968 ಬೀಜಗಳ (ನಿಯಂತ್ರಣ) ಆದೇಶ 1983 ಹಾಗೂ ರಸಗೊಬ್ಬರ (ನಿಯಂತ್ರಣ) ಆದೇಶ 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ 1955 ಈ ಕಾಯ್ದೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಮಾರಾಟ ಕೇಂದ್ರಗಳ ಮೇಲೆ ಇಲಾಖಾ ಪರಿವೀಕ್ಷಕರುಗಳು ಹಠಾತ್ ದಾಳಿ ನಡೆಸಿರುತ್ತಾರೆ. ಕಾಯ್ದೆಉಲ್ಲಂಘಿಸಿರುವ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಕಾಯ್ದೆಗಳಡಿಯಲ್ಲಿ ಮಾರಾಟ ಪರವಾನಗಿ ಅಮಾನತ್ತು : ರದ್ದತಿ ಸರಕು ಮುಟ್ಟುಗೋಲು ಮಾರಾಟ ತಡೆ ನೋಟೀಸು ಹಾಗೂ ನ್ಯಾಯಾಲಯದಲ್ಲಿ ಮೊಕದ್ದಮ್ಮೆ ಹೂಡುವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಸಾಲಿನಲ್ಲಿ ಹಂಚಿಕೆ ಮಾಡಲಾದ ಮನೆಗಳು

1191 (1359) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಯಾವ ಆಧಾರದ ಮೇಲೆ ಈ ಮನೆಗಳನ್ನು ಹಂಚಿಕೆ ಮಾಡಲಾಗುವುದು (ತಾಲ್ಲೂಕುವಾರು ವಿವರಗಳನ್ನುನೀಡುವುದು)?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಆಶ್ರಯ - ೨೫,೦೦೦

ಆ) ಜನಸಂಖ್ಯೆ ಆಧಾರದ ಮೇಲೆ ಜಿಲ್ಲಾವಾರು ಗುರಿ ನಿಗಧಿಪಡಿಸಲಾಗಿದೆ (ಪ್ರತಿ ಲಗತ್ತಿಸಿದೆ)

SL. NO.	NAME OF THE DISTRICT	ASHRAYA
1	BANGALORE URBAN	-
2	BANGALORE RURAL	756
3	BELGAUM	2025
4	BELLARY	1378
5	BIDAR	645
6	BIJAPUR	1228
7	BAGALKOT	508